ಎಲ್ ಎ ಸಿ. 8/2015
ಪಿ ಡಬ್ಲ್ಯುಃ 1
ದಿನಾಂಕ 11-01-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಒಂದನೇ ಎದುರುದಾರರ ಪರಃ ಎ ಜಿ ಪಿ ರವರಿಂದಃ</u>

1 ನೇ ಎದುರುದಾರರು ಭೂಸ್ವಾಧೀನ ಪಡಿಸಿಕೊಳ್ಳುವ ಮೊದಲು ತನಿಖೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನಂತರ ನಾವು ಸ್ಥಳ ತನಿಖೆ ಮಾಡಿರುತ್ತೇವೆ ಎಂದು ನುಡಿದಿರುತ್ತಾರೆ. 2009 ರಲ್ಲಿ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ. ದಿನಾಂಕ 10/03/2020 ರಂದು ನಿಪಿ-3 ರಂತೆ ದೃಡೀಕರಣ ಪತ್ರವನ್ನು ಪಡೆದಿರುತ್ತೇನೆ ಎಂದರೆ ನಿಜ. ರೈಲ್ವೆ ಮಾರ್ಗವಾಗಿ ಸುಮಾರು 10 ವರ್ಷಗಳಿಗಿಂತ ಹೆಚ್ಚಾಗಿದೆ. ಸಾಕ್ಷಿ ಮುಂದುವರೆದು ರೈಲ್ವೆ ಮಾರ್ಗಕ್ಕಾಗಿ ನಮ್ಮ ಭೂಮಿಯನ್ನು ತೆಗೆದುಕೊಂಡಿರುವುದಿಲ್ಲ, ರಸ್ತೆಗಾಗಿ ಪಡೆದುಕೊಂಡಿರುತ್ತಾರೆ.

ಜಮೀನನ್ನು ಸ್ವಾಧೀನ ಪಡಿಸಿಕೊಂಡ ಬಗ್ಗೆ ಪರಿಹಾರದ ಬಾಬ್ತು 2,90,000 ರೂ ಹಣವನ್ನು ಘೋಷಣೆ ಮಾಡಿರುತ್ತಾರೆ, ಆದರೆ ಸದರಿ ಹಣವನ್ನು ನಾನು ಪಡೆದುಕೊಂಡಿರುವುದಿಲ್ಲ. ಆರೋಗ್ಯಕರವಾದ ಒಂದು ಮರ ಎಷ್ಟು ಇಳುವರಿ ಕೊಡಬಹುದೆನ್ನುವ ಬಗ್ಗೆ ನಿಪಿ-3 ರಂತೆ ದಾಖಲೆ ಹಾಜರುಪಡಿಸಿದ್ದೀನಿ ಎಂದರೆ ನಿಜ. ಜಮೀನನ್ನು ಸ್ವಾಧೀನ ಪಡಿಸಿಕೊಂಡ ಕಾಲದಲ್ಲಿ ಎಷ್ಟು ಬೆಲೆ ಇತ್ತೋ ಅಷ್ಟನ್ನು ಆದೇಶ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಕೇವಲ ಜಮೀನಿಗೆ ಮಾತ್ರ ಪರಿಹಾರ ಆದೇಶ ಮಾಡಿದ್ದಾರೆ, ಅದರಲ್ಲಿದ್ದ

ಅಡಿಕೆ ಮರ ಮತ್ತು ಬೋರ್ವೆಲ್ ಬಗ್ಗೆ ಯಾವುದೇ ಹಣದ ಆದೇಶ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ.

ನಿಪಿ-6 ರಿಂದ 8 ರ ದಾಖಲೆಗಳು ನಮ್ಮ ಪಕ್ಕದ ಜಮೀನಿನವರ ಅಡಿಕೆ ತೋಟವನ್ನು ಸ್ವಾಧೀನ ಪಡಿಸಿಕೊಂಡಿರುವ ಬಗ್ಗೆ ಮತ್ತು ಅದಕ್ಕೆ ನೀಡಿರುವ ಪರಿಹಾರದ ಬಾಬ್ತು ಹಾಜರುಪಡಿಸಿದ್ದೇನೆ ಎಂದರೆ ನಿಜ. ನಮ್ಮ ಜಮೀನಿನಲ್ಲಿ ಯಾವುದೇ ಬೋರ್ವೆಲ್ ಇರಲಿಲ್ಲ ಎಂದರೆ ಸರಿಯಲ್ಲ. ಭೂಸ್ವಾಧೀನ ಪಡಿಸಿಕೊಂಡ ಜಮೀನಿನಲ್ಲಿ 110 ಅಡಿಕೆ ಮರ, 4 ತೆಂಗಿನ ಮರ, ಒಂದು ಬೋರ್ವೆಲ್ ಇತ್ತು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. 1 ನೇ ಎದುರುದಾರರು ಅಂದಿನ ಮಾರುಕಟ್ಟೆ ಬೆಲೆಯಂತೆ ಪರಿಹಾರವನ್ನು ಆದೇಶ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.

ಕಡೂರು.